# ಟೀವಿಗೂ ಸೈ ಸಿನಿಮಾಕ್ಕೂ ಜೈ

**ದರ್ಶಿನಿ ಗೌಡ**
ಸ್ಟಾರ್ ಸುವರ್ಣ 'ಪ್ರೇಮಲೋಕ' ಮನಸ್ವಿನಿ



◆ **ನಿಮಗೆ ಅವಕಾಶ ಸಿಕ್ಕಿದ್ದು ಹೇಗೆ?**

ಈ ಅವಕಾಶಕ್ಕೆ ಮೆಟ್ಟಿಲಾಗಿದ್ದು ಟೀವಿಯಲ್ಲಿ ನಿರೂಪಕಿಯಾಗಿದ್ದು. ಉದಯದಲ್ಲಿ ಆ್ಯಂಕರ್ ಆಗಿದ್ದೆ, ಅದಕ್ಕಿಂತ ಮುಂಚೆ ಕಸ್ತೂರಿಯಲ್ಲಿ ಕೆಲಸ ಮಾಡ್ತಿದ್ದೆ. ಅಲ್ಲೇ ಕನ್ನಡ ಸಿನಿಮಾಕ್ಕೆ ಅವಕಾಶ ಬಂತು. ಅದು ಬಿಡುಗಡೆ ಆಗಬೇಕಿದೆ. ಇದರ ಜೊತೆ ತಮಿಳು ಸಿನಿಮಾದಲ್ಲೂ ನಟಿಸುತ್ತಿದ್ದೇನೆ. ಅದು ಅರ್ಧ ಆಗಿದೆ. ಪೊಂಗಲ್ ನಿಮಿತ್ತ ದೀರ್ಘ ರಜೆ ಇದ್ದಿದ್ದರಿಂದ ಇದರಲ್ಲಿ ತೊಡಗಲು ಅನುಕೂಲವಾಯಿತು. ನಟಿಸಲು ಬರಲ್ಲಾ ಎಂದು ಹೇಳಿದರೂ ನೀವು ಮಾಡ್ತೀರಾ ಬನ್ನಿ ಎನ್ನುವ ಒತ್ತಾಸೆಯಿಂದಲೇ ಅವಕಾಶ ಸಿಕ್ಕಿದೆ. ಅದರಲ್ಲೂ ವಿಜಯ ಸೂರ್ಯ ಅವರ ಜೊತೆ ನಟಿಸುವ ಅವಕಾಶ ಸಿಕ್ಕಿದ್ದು ತೀರ ಆಕಸ್ಮಿಕ. ನಟನೆಯನ್ನು ನಾನು ಕಲಿತಿಲ್ಲ ಎಂದು ಆರಂಭದಲ್ಲಿ ಹಿಂದೇಟು ಹಾಕಿದ್ದೆ. ಅದಕ್ಕೆ ನನ್ನ ತಂದೆ 'ಇಲ್ಲ ಎನ್ನಬೇಡ ನೀನು ಮಾಡು. ಎಷ್ಟೋ ಜನರು ಸಾಕಷ್ಟು ಪರಿಶ್ರಮದಿಂದ ಜಪಿಸಿದರೂ ಅವಕಾಶ ಎನ್ನುವುದು ಸಿಗಲ್ಲ. ನಿನಗೆ ಅದೇ ಹುಡುಕಿಕೊಂಡು ಬಂದಾಗ ಏಕೆ ಅದನ್ನು ಕಳೆದುಕೊಳ್ಳುತ್ತೀಯಾ' ಎಂದು ಹೇಳಿದರು.

ಕಸ್ತೂರಿಯಲ್ಲಿ ಇದ್ದಾಗ ಒಂದು ಪ್ರೋಮೊ ಮಾಡಿದ್ದೆ. ಅದನ್ನು ನೋಡಿ ಕನ್ನಡದಲ್ಲಿ '100% ಲಕ್' ಸಿನಿಮಾದಲ್ಲಿ ನಟಿಸಲು ಸಾಧ್ಯವಾಯಿತು. ಉದಯದಲ್ಲಿ ಇದ್ದಾಗ ತಮಿಳು ಸಿನಿಮಾದಲ್ಲಿ ನಟಿಸಿದ್ದೇನೆ. ಇದರ ಜೊತೆ ಟೀವಿಯಲ್ಲೂ ಕೆಲಸ ಮಾಡಬೇಕು ಎಂದುಕೊಂಡಿದ್ದೇನೆ.

◆ **ನೀವು ಮತ್ತೆ ಶೋಗಳಲ್ಲಿ ಕಾಣಿಸಿಕೊಳ್ಳುವುದರಿಂದ ಬೇಡಿಕೆ ಕಡಿಮೆ ಆಗುವುದಿಲ್ಲವೇ?**

ಹಾಗೆ ಅನ್ನಿಸುವುದಿಲ್ಲ. ನನ್ನ ವೃತ್ತಿ ಆರಂಭಿಸಿದ್ದೇ ಟೀವಿಯಿಂದ. ನಾನು ನಟಿಸುತ್ತೇನೆ, ಜನ ಟೀವಿಯನ್ನೂ ನೋಡುತ್ತಾರೆ ಎಂದಿಟ್ಟುಕೊಳ್ಳಿ. ಆದರೆ, ಅವರಿಂದ ಪ್ರತಿಕ್ರಿಯೆ ಸಿಗುವುದಿಲ್ಲ. ಅವರನ್ನು ನಾವು ಏಕಮುಖವಾಗಿ ತಲುಪಿರುತ್ತೇವೆ. ಟೀವಿ ಶೋಗಳಲ್ಲಿ ಅವರ ಕಾಮೆಂಟ್ ಸಿಗುತ್ತವೆ. ಆಗ ನಾನು ಜನರ ಮನಸ್ಸನ್ನು ತಲುಪಿದ್ದೇನಾ ಇಲ್ಲವೇ ಎಂದು ಗೊತ್ತಾಗುತ್ತದೆ. ಅದು ನನ್ನ ಮುಂದಿನ ಬೆಳವಣಿಗೆಗೂ ಸಹಾಯ ಆಗುತ್ತದೆಯೇ ಹೊರತು ಅದರಿಂದ ಬೇಡಿಕೆ ಕಡಿಮೆ ಆಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ.

◆ **ಮುಂದಿನ ನೀಲ ನಕ್ಷೆ ಹಾಕಿಕೊಂಡಿದ್ದೀರಾ?**

ಏನು ನಿರ್ಧರಿಸಬೇಕು ಎನ್ನುವ ಗೊಂದಲ ಇದೆ. ಏಕೆಂದರೆ ನಾನು ಊಹೆಯನ್ನೇ ಮಾಡದ ಅವಕಾಶಗಳು ಬರುತ್ತಿವೆ. ನಾನು ಓದುವಾಗ ಇದ್ದ ಕನಸೆಂದರೆ ಎಂಜಿನಿಯರ್ ಆಗಬೇಕು. ಹಾಸನದಲ್ಲಿ ಡಿಪ್ಲೊಮೊ ಮಾಡುತ್ತಿದ್ದೆ. ಎರಡನೇ ವರ್ಷದಲ್ಲಿ ಸ್ಥಳೀಯ ವಾಹಿನಿಯಲ್ಲಿ ಅವಕಾಶ ಸಿಗ್ತು. ನಂತರ ಕಸ್ತೂರಿಗೆ ಬಂದೆ. ಅದರ ಬೆನ್ನಲ್ಲೇ ಉದಯ ಜೊತೆಗೆ ಸಿನಿಮಾ ಹೀಗೆ ಒಂದಾದ ಮೇಲೆ ಒಂದರಂತೆ ಸಿಕ್ಕಿವೆ.

◆ **ನಿಮ್ಮ ಪರಿಚಯ ಮಾಡಿಕೊಡಿ...**

ಹೆಸರು ದರ್ಶಿನಿ ಗೌಡ ಬಹುತೇಕರು ಪ್ರಿಯಾ ಎಂದು ಕರೆಯುತ್ತಾರೆ. ಮೂಲಹೆಸರು ಪ್ರಿಯದರ್ಶಿನಿ. ಅಪ್ಪ ಮೂರ್ತಿ ಗುತ್ತಿಗೆದಾರ, ಅಮ್ಮ ರಾಜೇಶ್ವರಿ ಗೃಹಿಣಿ. ಪೂರ್ವಿಕರ ಊರು ಹಾಸನ ಜಿಲ್ಲೆಯ ಗೊರೂರು ಸಮೀಪದ ಮರಡಿ ಎಂಬ ಹಳ್ಳಿ. ನಾವು ನೆಲೆಸಿರುವುದು ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ಸಮೀಪದ ಬೀಚನಹಳ್ಳಿ. ಕಬಿನಿ ಡ್ಯಾಮ್ ಪಕ್ಕದಲ್ಲಿಯೇ ನಮ್ಮ ಮನೆ ಇದೆ. ಅಲ್ಲೇ ಸರ್ಕಾರಿ ಪ್ರೌಢಶಾಲೆಯಲ್ಲಿ ಓದಿದೆ. ನಂತರ ಪಿಯುಸಿ ಸೈನ್ಸ್ ಓದಿದೆ. ಮೊದಲಶ್ರೇಣಿಯಲ್ಲಿ ಪಾಸಾದರೂ ಸಿಇಟಿ ಬರೆಯದೆ ಎಂಜಿನಿಯರಿಂಗ್ ಮಿಸ್ ಮಾಡಿಕೊಂಡೆ. ತಾಂತ್ರಿಕ ಶಿಕ್ಷಣ ಪಡೆಯುವ ಉದ್ದೇಶದಿಂದ ಹಾಸನದಲ್ಲಿ ಡಿಪ್ಲೊಮೊಗೆ ಸೇರಿದೆ. ಮೊದಲ ವರ್ಷ ಮುಗಿಸಿ ಬಿಇ ಸೇರಬೇಕು ಎಂದುಕೊಂಡಿದ್ದೆ. ಆದರೆ, ಹಾಗೆ ಮಾಡದೆ ಅದನ್ನೇ ಮುಂದುವರಿಸಿದೆ. ಮೊದಲ ವರ್ಷ ತುಂಬ ಆಸಕ್ತಿ ಇತ್ತು. 81% ಎರಡನೇ ವರ್ಷ 82% ಅಂಕಪಡೆದು ಪಾಸಾದೆ. ಅಷ್ಟರಲ್ಲಿ ಸ್ಥಳೀಯ ವಾಹಿನಿಯಲ್ಲಿ ಆ್ಯಂಕರ್ ಆದೆ. ಆನಂತರ ಸಂಪೂರ್ಣ ಚಿತ್ತ ಬದಲಾಯಿತು. ಓದುವ ಆಸಕ್ತಿ ಕಡಿಮೆಯಾಯಿತು. ವೃತ್ತಿ ಬದುಕಿನ ಆಲೋಚನೆಯೂ ಬದಲಾಯಿತು. ಡಿಪ್ಲೊಮೊ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾದರೂ ಆ್ಯಂಕರ್ ಆದೆ.

◆ **ನಿಮ್ಮ ಪಾತ್ರದ ಕಥೆ ಏನು?**

'ಪ್ರೇಮಲೋಕ' ಹಿಂದಿ ಧಾರಾವಾಹಿಯೊಂದರ ರಿಮೇಕ್ ಮಾಡುತ್ತಿದ್ದರು. ಅದನ್ನೇ ಸ್ವಮೇಕ್ ಮಾಡುವ ನಿಟ್ಟಿನಲ್ಲಿ ಕಥೆಯಲ್ಲಿ ಬದಲಾವಣೆಯನ್ನು ತಂದಿದ್ದಾರೆ. ಈಗ ಮತ್ತೊಬ್ಬ ನಾಯಕಿಯ ಪ್ರವೇಶ ಆಗುತ್ತಿದೆ. ಇದರಲ್ಲಿ ಏನಾಗುತ್ತದೆ ಎಂದರೆ, ಚಿಕ್ಕವಳಿದ್ದಾಗ ಮಾವನ ಜೊತೆ ಹೋಗುತ್ತಿರುತ್ತಾರೆ. ಒಮ್ಮೆ ಟೀವಿಯಲ್ಲಿ ಎಲ್ಲೋ ನನ್ನನ್ನು ನೋಡಿ ಸತ್ತಿಲ್ಲ ಆಕೆ ಬದುಕಿದ್ದಾಳೆ ಎಂದು ಅವರು ಖಚಿತಪಡಿಸಿಕೊಳ್ಳುತ್ತಾರೆ. ನನಗೆ ಮಾವನೆಂದರೆ ಸರ್ವಸ್ವ. ನನ್ನ ಪಾತ್ರ ಪಾತ್ರ ತುಂಬ ಚೂಟಿಯಾಗಿದೆ. ತುಂಬ ಮಾತನಾಡುತ್ತೇನೆ. ವಾಸ್ತವದಲ್ಲಿ ನನ್ನ ಮೂಲ ಗುಣಗಳೇ ಪಾತ್ರದಲ್ಲಿ ಕಾಣಿಸುತ್ತಿರುವುದರಿಂದ ನಟನೆ ಮಾಡುತ್ತಿದ್ದೇನೆ ಎಂದು ಅನ್ನಿಸುವುದಿಲ್ಲ.

■ **ರಾಘವೇಂದ್ರ ಕೆ.**